ಒ. ಎಸ್ ನಂ.61/2024 ಡಿ.ಡಬ್ಲೂ –1

<u>ದಿನಾಂಕಃ 11–08–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಪಾಟೀ ಸವಾಲು:– ಶ್ರೀ. ಎಸ್ ಕೆ ವಕೀಲರಿಂದ ವಾದಿ ಪರ</u>

2 ಮತ್ತು 3 ನೇ ಪ್ರತಿವಾದಿಯರು ನನ್ನ ಮಕ್ಕಳು ಎಂದರೆ ಸರಿ. ಮಂಗಳಬೀಸು ಗ್ರಾಮದ ಸರ್ವೆ ನಂಬರ್ 2 ರಲ್ಲಿ 01–03.04 ಎಕರೆ ಜಮೀನು ಇರುತ್ತದೆ. ನಾನು ವಾದಿಗೆ ಮಾರಾಟ ಮಾಡಲು ಒಪ್ಪಿಕೊಂಡಿರುವ 0–23.04 ಗುಂಟೆ ಜಮೀನು ಎಂದರೆ ಸರಿ. ನಿಪಿ–1 ಕ್ರಯ ಕರಾರು ಪತ್ರದಲ್ಲಿರುವ ಸಹಿ ನನದಾಗಿರುತ್ತದೆ. ನಿಪಿ–1 ರಲ್ಲಿ ನನ್ನ ಇಬ್ಬರು ಮಕ್ಕಳೂ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. 0–23.04 ಗುಂಟೆ ಜಮೀನು ಕರಾರು ಮಾಡಿಕೊಳ್ಳುವ ಪೂರ್ವದಲ್ಲಿಯೇ ಪೋಡಿ ಆಗಿತ್ತು. ಪೋಡಿ ಆಗಿದ್ದರೆ ಕ್ರಯ ಪತ್ರ ಮಾಡುವಾಗ 11–ಇ ನಕಾಶೆ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ. ನಮ್ಮ ಜಮೀನು ಪೋಡಿಯಾದ ದಿನಾಂಕ, ವರ್ಷ ನನಗೆ ನೆನಪಿರುವುದಿಲ್ಲ. ನಿಪಿ–8 ನಮ್ಮ ಜಮೀನಿಗೆ ಸಂಬಂದಿಸಿದ 11–ಇ ನಕಾಶೆ ಎಂದರೆ ಸರಿ. ನಿಪಿ–8 ರ ಪ್ರಕಾರ ನನಗೆ ಸರ್ವೆ ಇಲಾಖೆಯವರು 11–ಇ ನಕಾಶೆ ದಿಃ26.07.2023 ರಂದು ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದಕ್ಕಿಂತಲೂ ಪೂರ್ವದಲ್ಲಿ ನೀಡಿರುತ್ತಾರೆ ಆದರೆ ದಿನಾಂಕ ನಾನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಈ ಬಗ್ಗೆ ದಾಖಲಾತಿ ನನ್ನ ಬಳಿ ಇರುತ್ತದೆ ಮತ್ತು ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. 11–ಇ ನಕಾಶೆ ದಿಃ26.07.2023 ರಂದು ನನಗೆ ನೀಡಿರುತ್ತಾರೆ ಮತ್ತು ಅದಕ್ಕಿಂತ ಪೂರ್ವದಲ್ಲಿ ಪೋಡಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 11–ಇ ನಕಾಶೆ ವಾದಿಗೆ ನೀಡುವ 0–23.04 ಗುಂಟೆ ಜಮೀನಿನ ಬಗ್ಗೆ ಬ್ಲಾಕ್ ನಂ.2 ಎಂದು ನಮೂದು ಇರುತ್ತದೆ ಎಂದರೆ ಸರಿ.

ನಾನು ಕರಾರು ಆಗುವ 2 ವರ್ಷಗಳ ಮೊದಲು ಸದರಿ ದಾವಾ ಜಮೀನಿನ ಮೇಲೆ ಸಾಲ ಪಡೆದಿರುತ್ತೇನೆ. ಸದರಿ ಸಾಲ ಇನ್ನೂ ಬಾಕಿ ಇರುತ್ತದೆ. ಸಾಕ್ಷಿ ಮುಂದುವರೆದು ಸರ್ಕಾರದಿಂದ ಸದರಿ ಸಾಲ ಮನ್ನಾ ಆಗುತ್ತದೆ ಎಂದು ಕಾಯುತ್ತಿದ್ದೇನೆ ಎಂದು ನುಡಿಯುತ್ತಾರೆ. 2018–19 ರಲ್ಲಿ ನಾನು ಸಾಲ ಮನ್ನಾ ಆಗುತ್ತದೆ ಎಂದು ಕಾಯುತ್ತಿದ್ದೆ. ಕ್ರಯ ಕರಾರು ದಿನಾಂಕಃ20.05.2022 ರಂದು ಆಗಿರುತ್ತದೆ ಎಂದರೆ ಸರಿ. ಕ್ರಯ ಕರಾರು ಆಗುವ ಸಮಯದಲ್ಲಿ ಅದರಲ್ಲಿನ ಷರತ್ತುಗಳನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ

ಸರಿ. ನಾನು ನನ್ನ ವಕೀಲರಿಗೆ ದಾವಾ ಆಸ್ತಿಯ ಮೇಲೆ ಸಾಲ ಇತ್ತು ಎಂದು ಹೇಳಿರುತ್ತೇನೆ. ಆದರೆ ಪ್ರತಿವಾದ ಪತ್ರದಲ್ಲಿ ನಮ್ಮ ವಕೀಲರು ಸಾಲ ಇದೆ ಎಂದು ತಪ್ಪಾಗಿ ಬರೆದಿರಬಹುದು ಎಂದು ಹೇಳುತ್ತಾರೆ. ನಾನು ಸಾಲವನ್ನು 2019 ನೇ ಇಸವಿಯಲ್ಲಿ ಪಡೆದಿರಬಹುದು. ನಿಪಿ-11 ಪಹಣಿ ದಾವಾ ಆಸ್ತಿಗೆ ಸಂಬಂದಪಟ್ಟ ಪಹಣಿ ಆಗಿರುತ್ತದೆ. ನಿಪಿ-11 ರ ಪಹಣಿಯಲ್ಲಿ 2009-10 ನೇ ಇಸವಿಯಲ್ಲಿ ಸಾಲ ಪಡೆದುಕೊಂಡಿರುವ ಬಗ್ಗೆ ಬರೆಯಲಾಗಿದೆ ಎಂದರೆ ಸರಿ. ಸಾಲ ಈಗಲೂ ಸಹ ಬಾಕಿ ಇರುತ್ತದೆ ಮತ್ತು ತೀರುವಳಿ ಆಗಿರುವುದಿಲ್ಲ ಎಂದರೆ ಸರಿ. ನಿಪಿ-2 ರಲ್ಲಿರುವ ಪುಟ ಸಂಖ್ಯೆ 2 ರಲ್ಲಿ 3 ಸಹಿಗಳಿದ್ದು ಅಕಿಗಳ ಪೈಕಿ ಮೊದಲ ಮತ್ತು ಮೂರನೆ ಸಹಿ ನನ್ನದಾಗಿದ್ದು 2 ನೇ ಸಹಿ ಅಂದರೆ ಮಧ್ಯದಲ್ಲಿರುವ ಸಹಿ ನನ್ನದಾಗಿರುವುದಿಲ್ಲ.

ನನ್ನ ಬ್ಯಾಂಕ್ ಖಾತೆ ಸಾಗರ ಡಿ ಸಿ ಸಿ ಬ್ಯಾಂಕ್ ಅಲ್ಲಿರುತ್ತದೆ. ನನ್ನ ಡಿ ಸಿ ಸಿ ಬ್ಯಾಂಕ್ ಖಾತೆಗೆ ವಾದಿಯು ತನ್ನ ಕರ್ನಾಟಕ ಬ್ಯಾಂಕ್, ಸಾಗರ ಶಾಖೆಯ ಖಾತೆಯ ಮುಖಾಂತರ 3 ಲಕ್ಷ ರೂ ಹಣ ವರ್ಗಾಣೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆ ನಂಬರ್ ಅನ್ನು ವಾದಿಗೆ ನಾನೇ ನೀಡಿರುತ್ತೇನೆ. ಕರಾರು ಆದ ನಂತರ ವಾದಿಗೆ ನಾನು ಯಾವುದೇ ನೋಟೀಸು ನೀಡಿರುವುದಿಲ್ಲ. ಕ್ರಯಪತ್ರವನ್ನು ದಿಃ 31.01.2023 ರೊಳಗೆ ಬರೆದುಕೊಡಬೇಕು ಎಂದು ಕ್ರಯ ಕರಾರಿನಲ್ಲಿ ನಮೂದಿಸಲಾಗಿರುತ್ತದೆ. ನಿಪಿ-8 ರ 11-ಇ ನಕಾಶೆ ನನಗೆ ಸಿಕ್ಕಿರುವುದೇ ದಿಃ26.07.2023 ರಂದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದಕ್ಕಿಂತ ಪೂರ್ವದಲ್ಲೇ ನನಗೆ ಸದರಿ ದಾಖಲೆ ದೊರತಿರುತ್ತದೆ ಎಂದು ನುಡಿಯುತ್ತಾರೆ.

ನನಗೆ ಪಾನ್ ಕಾರ್ಡ್ ಇರುತ್ತದೆ ಆದರೆ ಅದರ ನಂಬರ್ ನನಗೆ ನೆನಪಿರುವುದಿಲ್ಲ. ಪಾನ್ ಕಾರ್ಡ್ ಮಾಡಿಸಿ ಒಂದು ವರ್ಷ ಆಗಿರಬಹುದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಪಾನ್ ಕಾರ್ಡ್ ನನಗೆ ದೊರೆತ ಒಂದು-ಎರಡು ತಿಂಗಳ ಪೂರ್ವದಲ್ಲಿ ನಾನು ಪಾನ್ ಕಾರ್ಡ್ ಗಾಗಿ ಅರ್ಜಿ ಸಲ್ಲಿಸಿದ್ದೆ. ನಾನೊಬ್ಬನೇ ಪಾನ್ ಕಾರ್ಡ್ ಪಡೆದಿರುತ್ತೇನೆ. 2 ಮತ್ತು 3 ನೇ ಪ್ರತಿವಾದಿಯರ ಬಳಿ ಪಾನ್ ಕಾರ್ಡ್ ಇರುತ್ತದೋ ಇಲ್ಲವೊ ನನಗೆ ಗೊತ್ತಿರುವುದಿಲ್ಲ. ವಾದಿಯ ಬಳಿ ಕ್ರಯದ ವ್ಯವಹಾರದ ಸಂಪೂರ್ಣ ಮೊತ್ತ ನನಗೆ ನೀಡಬೇಕು ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿ ಆ ರೀತಿ ಯಾವುದೇ ಮಾತುಕತೆ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ನನ್ನ ಹೆಸರಿಗೆ ಮಾತ್ರ ಹಣವನ್ನು ವರ್ಗಾವಣೆ

ಮಾಡಿರುತ್ತಾರೆ ನನ್ನ ಮಕ್ಕಳ ಹೆಸರುಗಳಿಗೆ ವರ್ಗಾವಣೆ ಮಾಡಿರುವುದಿಲ್ಲ. ನಿಪಿ-2 ರ 2 ನೇ ಪುಟದಲ್ಲಿ ಮೊದಲ ಸಹಿ ಇರುವ ಕೆಳಗಡೆ ಇರುವ ಎರಡು ಸಹಿಗಳು ನನ್ನ ಇಬ್ಬರು ಮಕ್ಕಳ ಸಹಿಗಳು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ